# ಕೂಸು ಕಂದಯ್ಯ ಒಳಹೊರಗೆ, ಬಂಗಾರ ಕಣ್ಣಮರೆಗೆ...

ವೆಂಕಟರಾಮು ಹೊಸದಾಗಿ ಮದುವೆಯಾದ ಯುವಕ. ಅರ್ಧರಾತ್ರಿಯವರೆಗೆ ಕೂತು ಅಡಿಕೆ ಸುಲಿತದ ಲೆಕ್ಕ ಬರೆದಿಟ್ಟು ಮಲಗು ಅಂದರೆ ಅವನಿಗೆ ಕಡುಕಷ್ಟವೆನಿಸುತ್ತಿತ್ತು. ಮಲಗುವ ಕೋಣೆಯಲ್ಲಿ ಕನಕ ಹೊರಳಾಡುತ್ತಿರುತ್ತಿದ್ದಳು. ಎಷ್ಟೋ ಸಲ ಅವಳಿಗೆ ಸಿಟ್ಟು ನೆತ್ತಿಗೇರಿರುತ್ತಿತ್ತು.

'ಇಷ್ಟು ಬೇಗ ಯಾಕೆ ಮಲಗೋಕೆ ಬಂದ್ರಿ? ಇನ್ನೊಂಸ್ವಲ್ಪ ಹೊತ್ತು ಕೂತಿದ್ರೆ ಬೆಳಗಾಗ್ತಿತ್ತು. ನೀವು ಮಲಗ್ದಿದ್ರೆ ಪ್ರಳಯ ಆಗ್ಬಿಡುತ್ತಾ?' ಎನ್ನುತ್ತಾ ಬಳಸಲು ಬಂದ ಕೈಗಳನ್ನು ದೂರ ತಳ್ಳುತ್ತಿದ್ದಳು ಕನಕ. ವೆಂಕಟರಾಮುವಿಗೆ ಅನಿಸದೆ ಇರುತ್ತದೆಯಾ? ಅಣ್ಣನ ಮದುವೆಯಾದಾಗಲೂ ಈ ಕೆಲಸವನ್ನು ತಾನು ಮಾಡುತ್ತಿದ್ದೆ. ಅವನು ಬೆಚ್ಚಗೆ ಹೆಂಡತಿಯ ಮಗ್ಗುಲು ಸೇರಿಕೊಳ್ಳುತ್ತಿದ್ದ. ಅವನಿಗೆ ಈ ಸೂಕ್ಷ್ಮ ಅರ್ಥವಾಗಬೇಕು. ಈಗಂತೂ ಅತ್ತಿಗೆ ಕೂಡಾ ಜೊತೆಯಲ್ಲಿಲ್ಲ. 'ಹೋಗೋ, ನೀನು ಮಲಕ್ಕಾ. ಕೊಳಗದ ಲೆಕ್ಕ ನಾನು ಬರೆದಿಡ್ತೀನಿ...' ಅಂದಿದ್ದರೆ ತಮ್ಮನ ಕಣ್ಣಲ್ಲಿ ದೊಡ್ಡ ಮನುಷ್ಯ ಆಗುತ್ತಿದ್ದ. ಅವನಿಗೊಂದು ನ್ಯಾಯ, ತನಗೊಂದು ನ್ಯಾಯ ಎಂದು ಈಗಾಗಲೇ ತಲೆಯೊಳಗೆ ಹುಳ ಬಿಟ್ಟುಕೊಂಡಿದ್ದ ವೆಂಕಟರಾಮನಿಗೆ ಅನಿಸಿದ್ದರೆ ಆಶ್ಚರ್ಯವಿಲ್ಲ ಎಂದುಕೊಳ್ಳುತ್ತಾಳೆ ಸೀತಾಲಕ್ಷ್ಮಿ. ಎಲ್ಲವನ್ನೂ ಕಣ್ಣಿಂದ ನೋಡಿ, ಕಿವಿಯಿಂದ ಕೇಳಿ ತಿಳಿಯಬೇಕಿಲ್ಲ. ಅನುಭವಕ್ಕೆ ಸತ್ಯದ ಅರಿವಾಗಿಬಿಡುತ್ತದೆ. ಎರಡಕ್ಕೆ ಎರಡು ಸೇರಿಸಿದರೆ ನಾಲ್ಕು ಅನ್ನುವುದಕ್ಕೆ ಭಾರೀ ಬುದ್ಧಿವಂತಿಕೆ ಬೇಕಾಗಿಲ್ಲವಲ್ಲ?

ಅವತ್ತೂ, ಇವತ್ತೂ ಗಂಟೆ ನಾಲ್ಕಾಗುವುದರೊಳಗೆ ಎದ್ದು ಅಡಿಕೆ ಒಲೆಯ ಬೆಂಕಿ ಹೊತ್ತಿಸಿ ಅಡಿಕೆ ಬೇಯಿಸುತ್ತಿದ್ದವನು ಶಿವರಾಮ. ಅದು ವೆಂಕಟರಾಮುವಿನ ತಲೆಗೆ ಹೋಗುತ್ತಿತ್ತೋ ಇಲ್ಲವೋ ಅವಳಿಗೆ ಗೊತ್ತಿಲ್ಲ. ಸೀತಾಲಕ್ಷ್ಮಿ ಇಲ್ಲಿದ್ದಾಗ ಗಂಡ ಅಡಿಕೆ ಒಲೆಗೆ ಬೆಂಕಿ ಹತ್ತಿಸಲು ಎದ್ದ ಅಂದರೆ ಕೀಲಿ ಕೊಟ್ಟಂತೆ ತಾನೂ ಎದ್ದು ಕೂರುತ್ತಿದ್ದಳು. ಇಡೀ ಒಂದು ತಪ್ಪಲೆಯ ಕಾಫಿ ಕುದಿಯಲು ತಡವಾಗುತ್ತದೆಯೆಂದು ಸಣ್ಣ ಪಾತ್ರೆ ಒಲೆಯ ಮೇಲಿಟ್ಟು ಗಂಡನಿಗೆ ಬೇಕಾಗುವಷ್ಟೇ ಕಾಫಿ ಕಾಸುತ್ತಿದ್ದಳು. ಅದರಲ್ಲೂ ಮಾಡಲು ಸುಲಭ ಎಂದು ಸಕ್ಕರೆ ಕಾಫಿ. ಸಕ್ಕರೆ ಕಾಫಿ ಅಂದರೆ ಆ ಕಾಲದಲ್ಲಿ ಮಲೆನಾಡಿಗರಿಗೆ ವಿಶೇಷ. ಸ್ಪೆಷಲ್ ಕಾಫಿ ಎಂದೇ ಅದಕ್ಕೆ ಹೆಸರು. ಮಂದಗಿನ ಎಮ್ಮೆ ಹಾಲು ಬೆರೆಸಿದ ಕಾಫಿ ರುಚಿಯಾಗಿಯೇ ಇರುತ್ತಿತ್ತು. ಬಲಗೈಲಿ ಒಂದು ದೊಡ್ಡ ಕೌಳಿಗೆ ತುಂಬಾ ಸುಡು ಕಾಫಿ, ಎಡಗೈಲಿ ಒಂದು ಲೋಟ ಹಿಡಿದು ಅಡಿಕೆ ಒಲೆಯ ಬಳಿ ಬರುತ್ತಿದ್ದ ಸೀತಾಲಕ್ಷ್ಮಿ ಶಿವರಾಮನ ಕಣ್ಣಿಗೆ ಅಮೃತ ಹಿಡಿದು ಬರುತ್ತಿರುವ ಮೋಹಿನಿಯಂತೆ ಕಾಣುತ್ತಿದ್ದಳು ಅಂದರೆ ಅತಿಶಯೋಕ್ತಿ ಅಲ್ಲ. ಹೊಟ್ಟೆ ಕರುಳು ನಡುಗಿಸುವ ಯಮ ಚಳಿ. ಚಟಪಟ ಕಿಡಿ ಕಾರುತ್ತಾ ಧಗಧಗಿಸಿ ಉರಿಯುವ ಒಲೆಯ ಶಾಖಕ್ಕೆ ಒಮ್ಮೆ ಮುಖ ಕೊಟ್ಟು, ಮತ್ತೊಮ್ಮೆ ಬೆನ್ನು ಕೊಟ್ಟು ಬಿಸಿ ಕಾಫಿ ಗುಟುಕರಿಸುವಾಗ ಸುಖ ಅಂದರೆ ಇನ್ನೇನು? ಎಬ ಭಾವನೆ ಶಿವರಾಮನಿಗೆ. 'ನೀನು ಕುಡಿದ್ಯೇನೇ?' ಕೇಳುತ್ತಾನೆ ಶಿವರಾಮ.

'ಒಳಗಿದೆ, ಕುಡೀತೀನಿ'.

'ಹೂಂ...' ಅನ್ನುವಷ್ಟಕ್ಕೆ ಮುಗಿಯುತ್ತದೆ ಒಲವಿನ ಮಾತುಕತೆ. 'ಇಷ್ಟಿದ್ದರೆ ಸಾಕು' ಅಂದುಕೊಳ್ಳುತ್ತಿದ್ದಳು ಸೀತಾಲಕ್ಷ್ಮಿ. ಕಮಲಕ್ಕ ಇದ್ದಿದ್ದರೆ ಹೆಂಡತಿಯ ಅನುಪಸ್ಥಿತಿ ಶಿವರಾಮನನ್ನು ಅಷ್ಟಾಗಿ ಕಾಡುತ್ತಿರಲಿಲ್ಲವೇನೋ. ಅತ್ತೆ ಕೂಡಾ ಚಟುವಟಿಕೆಯಿಂದಿರುತ್ತಿದ್ದರು. ಅತ್ತಿಗೆಯೋ, ಅಮ್ಮನೋ ಅವನ ಬೇಕು ಬೇಡಗಳನ್ನು ಗಮನಿಸುತ್ತಿದ್ದರು. ಈಗ ಒಂದು ಲೋಟ ಕಾಫಿಗೆ ಕಂಡವರ ಕೈ ಕಾಯುವ ಪರಿಸ್ಥಿತಿ ಎಂದು ಅವನಿಗೆ ಅನಿಸಿರಬಹುದು. ಬೆಳಿಗ್ಗೆ ನಾಲ್ಕಕ್ಕೆ ಎದ್ದು ಕೂತವನಿಗೆ ಏಳು ಗಂಟೆಯ ಹೊತ್ತಿಗೆ ಒಂದು ಲೋಟ ಕಾಫಿ ಸಿಕ್ಕಿದರೆ ಅವನ ಪುಣ್ಯ. ಮೇಲ್ನೋಟಕ್ಕೆ ತನಗೆ ಕಾಫಿ ಕುಡಿಯಲು ಯಾವ ಆತುರವೂ ಇಲ್ಲ, ಆ ಬಗ್ಗೆ ಗಮನವೇ ಇಲ್ಲ ಎಂಬಂತೆ ತೋರಿಸಿಕೊಳ್ಳುತ್ತಿದ್ದರೂ ಒಲೆಯ ಬೆಂಕಿಯಂತೆ ಅವನ ಎದೆಯಲ್ಲಿ ಜ್ವಾಲೆ ಧಗಧಗಿಸುತ್ತಿರುತ್ತಿತ್ತು. ವೆಂಕಟರಾಮು ಕಾಫಿ ಲೋಟ ಹಿಡಿದು ಕೈಗೆ ಕೊಡಲು ಬಂದರೆ 'ಅಲ್ಲಿಡು...' ಎಂದು ನಿರ್ಲಕ್ಷ್ಯದಿಂದ ಹೇಳಿ ಅಸಮಾಧಾನ ತಣಿಸಿಕೊಳ್ಳಲು ಪ್ರಯತ್ನಿಸುತ್ತಿದ್ದುದನ್ನು ಅವನೇ ಬಾಯಿ ಬಿಟ್ಟು ಹೇಳಿದ್ದು. ಕನಕ ತನ್ನನ್ನು ಹೇಗೆ ನಡೆಸಿಕೊಳ್ಳುತ್ತಿದ್ದಳು ಎಂದು ಹೆಂಡತಿಗೆ ಮನವರಿಕೆ ಮಾಡಲು ಪ್ರಯತ್ನಿಸಿದ್ದು.

